Right to Information Act has been notified, and this, together with the citizen's charters that many departments have released, will enhance transparency and accountability in administration.

75. ಈ ಘನತೆವೆತ್ತ ಸಭೆಯನ್ನು ಉದ್ದೇಶಿಸಿ ಮಾತನಾಡುವ ಸದಾವಕಾಶ ದೊರೆತಿರುವುದು ನನ್ನ ಸೌಭಾಗ್ಯ. ಬಡ ಜನರ ಪರಿಸ್ಥಿತಿ ಸುಧಾರಣೆಯಾಗುವ, ಎಲ್ಲರ ಜೀವನ ಮಟ್ಟವನ್ನು ಹೆಚ್ಚಿಸುವ ಮತ್ತು ಎಲ್ಲರಲ್ಲಿ ಸಂಪೂರ್ಣ ಸಂತೃಪ್ತಿ ಕಾಣುವಂಥ ಫಲಪ್ರದ ಮತ್ತು ಶಾಂತಿಯುತ ವರ್ಷವನ್ನು ಕರ್ನಾಟಕದ ಜನರು ಕಾಣಲೆಂದು ನಾನು ಹಾರೈಸುತ್ತೇನೆ. ಈ ಗುರಿಯನ್ನು ಸಾಧಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸೋಣ.

ಜೈ ಕರ್ನಾಟಕ, ಜೈ ಹಿಂದ್

(ಸದನವು ಮಧ್ಯಾಹ್ನ 12 ಗಂಟೆ 14 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 15 ನಿಮಿಷಗಳ ನಂತರ ಸೇರಲು ನಿಶ್ಚಯಿಸಿತು)

ಸದನವು ಪುನಃ 12 ಗಂಟೆ 32 ನಿಮಿಷಕ್ಕೆ ಸಮಾವೇಶಗೊಂಡಿತು)

(ಸನ್ಮಾನ್ಯ ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

2. ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ) :- (ಅ) ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು (ಅನುಬಂಧ-ಅ) ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ಆ) ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಅಥವಾ ರಾಷ್ಟ್ರಾಧ್ಯಕ್ಷರಿಂದ ಸಂದರ್ಭಾನುಸಾರ ಒಪ್ಪಿಗೆ ಪಡೆದ ಈ ಕೆಳಕಂಡ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಹನ್ನೊಂದನೆ ವಿಧಾನಸಭೆಗೆ ಸಂಬಂಧಪಟ್ಟಂತೆ ರಾಷ್ಟ್ರಪತಿಯವರಿಂದ / ರಾಜ್ಯಪಾಲರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆವ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
1.	ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ) ವಿಧೇಯಕ, 2002	31-12-2002	ರಾಷ್ಟ್ರಪತಿಯವರು
2.	ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2002	8-10-2002	ರಾಷ್ಟ್ರಪತಿಯವರು
3.	ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2002	30-3-2002	ರಾಜ್ಯಪಾಲರು
4.	ಕರ್ನಾಟಕ ಧನ ವಿನಿಯೋಗ (ಸಂಖ್ಯೆ 2) ವಿಧೇಯಕ, 2002	31-7-2002	ರಾಜ್ಯಪಾಲರು
5.	ಕರ್ನಾಟಕ ಮೋಟಾರು ವಾಹನಗಳ ತೆರಿಗೆ ಮತ್ತು ಇತರ ಕಾನೂನಿನ (ತಿದ್ದುಪಡಿ) ವಿಧೇಯಕ, 2002	23-08-2002	ರಾಜ್ಯಪಾಲರು

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆವ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
6.	ಕರ್ನಾಟಕ ಧನವಿನಿಯೋಗ (ಸಂಖ್ಯೆ 3) ವಿಧೇಯಕ 2002	23-08-2002	ರಾಜ್ಯಪಾಲರು
7.	ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) ತಿದ್ದುಪಡಿ ವಿಧೇಯಕ, 2002	27-8-2002	ರಾಜ್ಯಪಾಲರು
8.	ಕರ್ನಾಟಕ ಅಂಗಡಿಗಳ ಮತ್ತು ವಾಣಿಜ್ಯ ಕಾರ್ಯಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2002	27-8-2002	ರಾಜ್ಯಪಾಲರು
9.	ಕರ್ನಾಟಕ ಸರ್ಕಾರ ಖಾತರಿಗಳ ಮೇಲಿನ ಮಿತಿ (ತಿದ್ದುಪಡಿ) ವಿಧೇಯಕ, 2002	27-8-2002	ರಾಜ್ಯಪಾಲರು
10.	ಕರ್ನಾಟಕ ಆರ್ಥಿಕ ಹೊಣೆಗಾರಿಕೆ ವಿಧೇಯಕ, 2002	27-8-2002	ರಾಜ್ಯಪಾಲರು
11.	ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಬುಡಕಟ್ಟುಗಳ ಆಯೋಗ ವಿಧೇಯಕ, 2002	6-9-2002	ರಾಜ್ಯಪಾಲರು
12.	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2002	6-9-2002	ರಾಜ್ಯಪಾಲರು
13.	ಕರ್ನಾಟಕ ಸ್ಟ್ಯಾಂಪು (ತಿದ್ದುಪಡಿ) ವಿಧೇಯಕ, 2002	6-9-2002	ರಾಜ್ಯಪಾಲರು
	ವಿಧಾನ ಪರಿಷತ್ತಿನ ವಿಧೇಯಕಗಳು		
1.	ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಭಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ವಿಧೇಯಕ, 2002	12-8-2002	ರಾಜ್ಯಪಾಲರು
2.	ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ಎರಡನೇ ತಿದ್ದುಪಡಿ) ವಿಧೇಯಕ, 2002	12-8-2002	ರಾಜ್ಯಪಾಲರು
3.	ಕರ್ನಾಟಕ ನೀರಾವರಿ ಮತ್ತು ಇತರ ಕೆಲವು ಕಾನೂನು (ತಿದ್ದುಪಡಿ) ವಿಧೇಯಕ, 2002	12-8-2002	ರಾಜ್ಯಪಾಲರು

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆವ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
4.	ಕರ್ನಾಟಕ ಕೊಳಚೆ ಪ್ರದೇಶಗಳ ಮೇಲ್ಪಾಟು ಮತ್ತು ನಿರ್ಮೂಲನಾ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2002	6-9-2002	ರಾಜ್ಯಪಾಲರು
5.	ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುವಡಿ) ವಿಧೇಯಕ, 2002	6-9-2002	ರಾಜ್ಯಪಾಲರು

ಅಧ್ಯಕ್ಷರು :- ವಿಧೇಯಕಗಳ ಪಟ್ಟಿಯನ್ನು ಮಂಡಿಸಲಾಯಿತು.

ಪ್ರಕಟಣೆ

ವಿಷಯ :- ವಿಧಾನಸಭೆಯ ಕಾರ್ಯಕಲಾಪಗಳು

ಅಧ್ಯಕ್ಷರು :- ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಪಕ್ಷದ ನಾಯಕರುಗಳು ಬಯಸಿದಂತೆ ಸದನವನ್ನು ಈ ದಿನ ಮುಂದೂಡಿ ಪುನಃ ದಿನಾಂಕ: 3-03-2003ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುತ್ತದೆಂದು ತಿಳಿಸಬಯಸುತ್ತೇನೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ. (ಸದನವು ಮಧ್ಯಹ್ನ 12 ಗಂಟೆ 34 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 3ನೇ ಮಾರ್ಚ್ ಮಾಹೆ 2003ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ

(ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ರೂಪಾಂತರ)

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

1. ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಸ್ವಾಗತಿಸಲು ನನಗೆ ತುಂಬ ಸಂತೋಷವಾಗುತ್ತಿದೆ. ಕಳೆದ ವರ್ಷ ವಿಶ್ವದಲ್ಲಿ, ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಅನೇಕ ದುರಂತ ಘಟನೆಗಳು ಸಂಭವಿಸಿದವು. ವಿಶ್ವ ವಾಣಿಜ್ಯ ಕೇಂದ್ರದ ದುರ್ಘಟನೆಯ ತರುವಾಯದ ಹಲವಾರು ಭಯೋತ್ಪಾದಕ ದಾಳಿಗಳು, ಸಂಸತ್ತಿನ ಮೇಲೆ ಮತ್ತು ಜಮ್ಮು ಕಾಶ್ಮೀರ ವಿಧಾನಸಭೆಯ ಮೇಲೆ ನಡೆದ ದಾಳಿಯ ಘಟನೆಗಳು ಪ್ರಪಂಚವನ್ನೇ ನಡುಗಿಸಿವೆ ಮತ್ತು ಸಂಭವಿಸಿದ ಸಾವು ನೋವುಗಳಿಂದ ಇಡೀ ವಿಶ್ವ ಶೋಕತಪ್ತವಾಗಿದೆ. ಗುಜರಾತ್ ಘಟನೆಯು ಕೋಮು ಸೌಹಾರ್ದವನ್ನು ಮೂಡಿಸುವ ದಿಸೆಯಲ್ಲಿ ಕಂಕಣಬದ್ಧರಾಗಿ ನಿರಂತರ ಶ್ರಮಿಸಬೇಕಾದ ಅಗತ್ಯತೆಗಳಿಗೆ ಒತ್ತು ನೀಡಿದೆ. ಕರ್ನಾಟಕದಲ್ಲಿ, ದುರಾದೃಷ್ಟವಶಾತ್, ಕಾಡುಗಳ್ಳ ವೀರಪ್ಪನ್‌ನಿಂದ ಮಾಜಿ ಸಚಿವ ಶ್ರೀ ನಾಗಪ್ಪನವರ ಅಪಹರಣದ ಘಟನೆ ನಡೆದಿದ್ದು ಇದು ಅಪಹೃತರ ಸಾವಿನೊಂದಿಗೆ ಕೊನೆಗೊಂಡಿತು. ನನ್ನ ಸರ್ಕಾರ ಇಂತಹ ಹೀನ ಕೃತ್ಯಗಳನ್ನು ಬಲವಾಗಿ ಖಂಡಿಸುತ್ತದೆ ಮತ್ತು ಇಂಥ ಘಟನೆಗಳು ಆಗದಂತೆ ತಪ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ತನ್ನ ದೃಢ ನಿಲುವನ್ನು ಪುನ: ಒತ್ತಿಹೇಳುತ್ತದೆ. ಸರ್ಕಾರ ಸರ್ವ ಪ್ರಯತ್ನ ಮಾಡಿದರೂ ಶ್ರೀ ನಾಗಪ್ಪನವರ ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂಬುದು ಅತ್ಯಂತ ದು:ಖಕರ ಸಂಗತಿ.